OCTOBER 21, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಬೆಳಕಿನ ಹಬ್ಬ ದೀಪಾವಳಿಯ, ಸಂಭ್ರಮಾಚರಣೆಗೆ ನಾಡು ಸಿಂಗಾರಗೊಂಡಿದೆ. ಮಣ್ಣಿನ ಹಣತೆಗಳ ಸಾಲು, ಆಕಾಶಬುಟ್ಟಿಯ ತೇಲು ದೀಪಗಳು, ಕಬ್ಬು, ಬಾಳೆ ಕಂದು, ತಿಳಿರುತೋರಣ, ಹಬ್ಬದ ಮೆರಗನ್ನು ಹೆಚ್ಚಿಸಿವೆ. ನಾಡಿನ ದೇವಾಲಯಗಳಲ್ಲಿ, ವಿಶೇಷ ಪೂಜೆಗಳು ಸಾಂಗವಾಗಿ ನೆರವೇರುತ್ತಿವೆ. ಮಾರುಕಟ್ಟೆಗಳಲ್ಲಿ ಖರೀದಿ ಭರಾಟೆ ಇಂದೂ ಜೋರಾಗಿದೆ.

<><><>

ಸರಕು ಮತ್ತು ಸೇವಾ ತೆರಿಗೆ, ಜಿ.ಎಸ್.ಟಿ. ಎರಡನೇ ಅವೃತ್ತಿ ಪರಿಷ್ಕರಣೆ ಹಿನ್ನೆಲೆ, ದಿನ ನಿತ್ಯ ಬಳಕೆಯ, 54 ವಸ್ತುಗಳ ಕರ ಇಳಿಸಲಾಗಿದ್ದು, ಶ್ರೀ ಸಾಮಾನ್ಯರ ಖರೀದಿಗೆ ಬಲ ಬಂದಿದೆ. ಇಲೆಕ್ಟ್ರಾನಿಕ್ ವಸ್ತುಗಳ ಮೇಲಿನ ಕರ ದರ, ಶೇಕಡ 5ಕ್ಕೆ ಇಳಿಕೆಯಾದ ಹಿನ್ನೆಲೆ, ದೀಪಾವಳಿ ಬಚತ್ ಉತ್ಸವ್, ಟಿ.ವಿ., ಲ್ಯಾಪ್‌ಟಾಪ್ ಸೇರಿದಂತೆ, ಅಟೊಮೊಬೈಲ್ ವಸ್ತುಗಳ ಖರೀದಿ ಜೋರಾಗಿದೆ ಎನ್ನುತ್ತಾರೆ, ಧಾರವಾಡದ ವಿವಿಧ ಮಳಿಗೆಗಳ ಮಾಲೀಕರು.

<><><>

ದೀಪಾವಳಿ ಹಬ್ಬದ ಅಂಗವಾಗಿ, ಧಾರವಾಡ, ಬೆಳಗಾವಿ, ಹಾವೇರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ, ಗೌಳಿ ಸಮುದಾಯದ ಬಂಧುಗಳು, ಎಮ್ಮೆಗಳನ್ನು ಸಿಂಗರಿಸಿ, ಊರಿನ ತುಂಬ ಮೆರವಣಿಗೆ ಮಾಡಿ, ಸಂಭ್ರಮಿಸುತ್ತಾರೆ. ಪಾಂಡವರು ಅಜ್ಞಾತವಾಸ ಮುಗಿಸಿ, ನಾಡಿಗೆ ಮರಳುತ್ತಿದ್ದ ವೇಳೆ, ವಿರಾಟರಾಯನಿಗೆ ಸೇರಿದ್ದ ಗೋವುಗಳನ್ನು, ಕೌರವರು ಅಪಹರಿಸುತ್ತಾರೆ. ಅರ್ಜುನ ಅವುಗಳನ್ನು ರಕ್ಷಿಸಿದ ಹಿನ್ನೆಲೆ, ಬುಡಕಟ್ಟು ಸಮುದಾಯದ ಗೌಳಿಗರು, ದೀಪಾವಳಿ ಪಾಡ್ಯವನ್ನು, ವಿಶೇಷವಾಗಿ ಆಚರಿಸುತ್ತಾರೆ.

<><><>

ವಿಜಯಪುರ ಹಾಗೂ ವಿಜಯನಗರ ಜಿಲ್ಲೆಯ, ಲಂಬಾಣಿ ತಾಂಡಾಗಳಲ್ಲಿ, 'ದವಾಳಿ ದೀಪಾವಳಿ'ಯನ್ನು, ಸುಗ್ಗಿಯ ಹಬ್ಬವಾಗಿ ಆಚರಿಸುವ ಸಂಪ್ರದಾಯಕ್ಕೆ, ಭರದ ಸಿದ್ಧತೆಗಳು ನಡೆದಿವೆ. ಲಂಬಾಣಿ ಮಹಿಳೆಯರು, ಕಾಡಿಗೆ ತೆರಳಿ, 'ವಲ್ಲೇಣಾರ್ ಘೂಲ್' ತಂದು, ಹಂಚಿಕೊಳ್ಳುತ್ತಾರೆ.

<><><>

ದೀಪದ ಹಾಡು, ಎಂದೇ ಕರೆಯಲ್ಪಡುವ, ಮಲೆನಾಡ ಹೋರಿ ಬೆದರಿಸುವ ಹಬ್ಬ, ಹಾಗೂ 'ಅಂಟಿಕೆ–ಪಂಟಿಕೆ' ಕಲಾ ಪ್ರಕಾರದ ಪ್ರದರ್ಶನ, ಶಿವಮೊಗ್ಗ ಜಿಲ್ಲೆಯಲ್ಲಿ ವಿಶೇಷ.

<><><>

ಚಿಕ್ಕಮಗಳೂರು ಜಿಲ್ಲೆಯ, ವನವಾಸಿ, ಬುಡಕಟ್ಟು ಸಮುದಾಯದ ಬಾಂಧವರು, ದೀಪಾವಳಿ ಸಂರ್ಭದಲ್ಲಿ, ಅಂಟಿಗೆ–ಪಂಟಿಗೆಯನ್ನು, ವಿಶಿಷ್ಟವಾಗಿ ಆಚರಿಸುತ್ತಾರೆ. ಮನೆ ಮನೆಯಿಂದ ಜ್ಯೋತಿ ಪಡೆಯುವ, ಕಲಾ ಪ್ರದರ್ಶನ, ಶೃಂಗೇರಿ, ಕೊಪ್ಪ, ಕಳಸ ಹಾಗೂ ನರಸಿಂಹರಾಜಪುರ ತಾಲೂಕಿನ ಹಳ್ಳಿಗಳಲ್ಲಿ, ಹಿರಿಯರು ಇಂದಿಗೂ ಜೀವಂತವಾಗಿರಿಸಿದ್ದಾರೆ.

<><><>

ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲೂಕು, ಬೆಟ್ಟದ ಪುರದಲ್ಲಿ, ಪಂಜುಗಳನ್ನು ಹಿಡಿದು ಪಾಲ್ಗೊಳ್ಳುವ, ಪಾಡ್ಯದ ಮುನ್ನಾ ದಿನವಾದ ಇಂದು, ದೀವಟಿಗೆ ಉತ್ಸವ, ಪ್ರಸಿದ್ಧ.

<><><>

ಮಂಡ್ಯ ಜಿಲ್ಲೆ, ಕಿಕ್ಕೇರಿ ಹೋಬಳಿಯ, ಸಾಸಲು ಗ್ರಾಮದಲ್ಲಿ ದೀಪಾವಳಿಯಂದು, ಸಗಣಿ ಕಾಳಗ ನಡೆಯುವುದು ವಿಶೇಷ. ಮಾಣಿಕಶೆಟ್ಟಿ ಹಬ್ಬ ಎಂದೂ ಕರೆಯಲಾಗುತ್ತದೆ. ಮಕ್ಕಳು ಹಾಗೂ ಯುವಕರು, ಕತ್ತೆಯ ಮೇಲೆ ಕುಳಿತು, ಸಗಣಿ ಎರಚುವ ಸಂಪ್ರದಾಯ ಪಾಲಿಸಲಾಗುತ್ತದೆ.

<><><>

ತುಳು ನಾಡಿನ ದೀಪಾವಳಿ ಎಂದರೆ, 'ಮೀಪಿನ ಪರ್ಬ', ಸ್ನಾನದ ಹಬ್ಬ. 'ಕುಲೆ ಪರ್ಬ', ಭೂಮಿ ಪೂಜೆ, ಗೋಪೂಜೆ, ಬಲೀಂದ್ರ ಪೂಜೆ ಎಲ್ಲವೂ ಸಮ್ಮಿಳಿತಗೊಂಡಿದೆ.

<><><>

ಉಡುಪಿ ಜಿಲ್ಲೆಯ, ಕಾಪು, ಪಡುಬಿದ್ರಿ ಮೊದಲಾದೆಡೆ, 'ಮುಳ್ಳು ಮುಟ್ಟೆ' ಎಂಬ, ವಿಶಿಷ್ಟವಾದ ಆಚರಣೆ, ನಡೆಯುತ್ತದೆ. ದೀಪಾವಳಿ ಕೊನೆ ದಿನ, ಬೆಳಗ್ಗೆ, ಊರ ಜನ ಡೋಲು, ವಾದ್ಯಗಳೊಂದಿಗೆ, ಸಾಮೂಹಿಕವಾಗಿ ಪ್ರದಕ್ಷಿಣೆ ಹಾಕಿ, ಮುಳ್ಳುಮುಟ್ಟೆಗೆ ಬೆಂಕಿ ಹಚ್ಚಲಾಗುತ್ತದೆ. ಮುನ್ನಾ ದಿನ ರಾತ್ರಿ, ಬಂಟ ದೈವದ ಕೋಲ ನಡೆಯುತ್ತದೆ.

<><><>

ವಿಜಯನಗರ ಜಿಲ್ಲೆ, ಹೊಸಪೇಟೆಯ ಧರೋಜಿ ಬಳಿ ಅಪರೂಪದ 'ಸ್ಕಾಪ್ಸ್ ಗೂಬೆ'ಯನ್ನು, ಪಕ್ಷಿ ಪ್ರಿಯರು ದಾಖಲಿಸಿದ್ದಾರೆ. ಕಿವಿ ಸದೃಷ, ವಿಶಿ ್ಟ ಗರಿಯಂಥ ಕೊಂಬು ಹೊಂದಿರುವ ಈ ಗೂಬೆ, ತನ್ನ ಸುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳುವ, ಮೈ ಬಣ್ಣ ಹೊಂದಿದೆ. ಪಶ್ಚಿಮಘಟ್ಟದಲ್ಲಿ ಮಾತ್ರ ಕಾಣಸಿಗುವ ಗೂಬೆ, ಅಪರೂಪಕ್ಕೆ ಬಯಲು ಸೀಮೆಯ, ಹೊಸಪೇಟೆಯಲ್ಲಿ ಕಾಣಸಿಕ್ಕಿದೆ ಎಂದು, ಪರಿಸರ ಪ್ರೇಮಿ, ಪಂಪಯ್ಯ ಮಳೆಮಠ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಪಂಪಯ್ಯ ಮಳೆಮಠ ಧ್ವನಿ 40 ಸೆಕೆಂದುಗಳು

<><><>

ಆಕಾಶವಾಣಿಯ, ಬಹುಶ್ರುತ, ಮನ್ ಕಿ ಬಾತ್‌ನ, 127ನೇ ಆವೃತ್ತಿಗಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶ, ವಿದೇಶಗಳ ಭಾರತೀಯರಿಗೆ, ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಹಂಚಿಕೊಳ್ಳುವಂತೆ, ಕೋರಿದ್ದಾರೆ. ನಮೋ ಆಪ್, My Gov.in ಜಾಲತಾಣ, ಅಥವಾ 1800–11–7800 ಗೆ ಕರೆ ಮಾಡಿ, ಸಾರ್ವಜನಿಕರು ತಮ್ಮ ಸಲಹೆಗಳನ್ನು, ದಾಖಲಿಸಬಹುದಾಗಿದೆ. ಈ ತಿಂಗಳ ಕೊನೆ ಭಾನುವಾರ, 26ನೇ ತಾರೀಖು, ಬೆಳಗ್ಗೆ 11 ಗಂಟೆಗೆ, ಮನದ ಮಾತು ಪ್ರಸಾರವಾಗಲಿದೆ.

<><><>

ದೀಪಾವಳಿ ಸಂಭ್ರಮಾಚರಣೆ, ಪಟಾಕಿ ಸಿಡಿತದ ಅವಘಡದಿಂದ, ಸೂತಕವಾಗಿ ಪರಿಣಮಿಸದಿರಲಿ ಎಂದು, ಆರೋಗ್ಯ ಇಲಾಖೆ ಮನವಿ ಮಾಡಿದೆ. ಬೆಂಗಳೂರಿನ ಮಿಂಟೋ ಆಸ್ಪತ್ರೆಯಲ್ಲಿ, 13 ಜನರಿಗೆ ಕಣ್ಣುಗಳ ಗಾಯಕ್ಕೆ ಚಿಕಿತ್ಸೆ ನೀಡಲಾಗಿದೆ. ಒಟ್ಟು 33 ಪ್ರಕರಣಗಳು ವರದಿಯಾಗಿವೆ.

<><><>

ರಾತ್ರಿ 8 ರಿಂದ 10 ಗಂಟೆಯ ವರೆಗೆ, ಹಿರಿಯರ ಮಾರ್ಗದರ್ಶನದಲ್ಲಿ, ಮಕ್ಕಳು, ಹಸಿರು ಪಟಾಕಿಗಳನ್ನು ಸಿಡಿಸುವಂತೆ, ಕೋರಿದೆ. ಪಟಾಕಿ ಸಿಡಿಸುವ ವೇಳೆ, ಪಟಾಕಿಗಳ ಮೇಲೆ ನಮೂದಿಸಿದ ಸೂಚನೆ ಪಾಲಿಸುವಂತೆ, ಖಾಲಿ ಸ್ಥಳಗಳಲ್ಲಿ ಪಟಾಕಿ ಹಾರಿಸುವಂತೆ, ಮುನ್ನೆಚ್ಚರಿಕೆ ನೀಡಿದೆ. ಅವಘಡದ ಸಂದರ್ಭದಲ್ಲಿ, ಕೂಡಲೇ ಸಮೀಪದ ಕಣ್ಣಿನ ಆಸ್ಪತ್ರೆಗೆ ತೆರಳುವಂತೆ, ಸೂಚಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.